ಸಿಡಿಸಬೇಡ. ಡಿಸ್‌ಗಸ್ಟಿಂಗ್' ಎಂದು ಮಾರಿಸ್‌ನ ಭುಜದಮೇಲಿಂದ ಇಣುಕಿ ಆತನ ಮೂತ್ರದಮೂಲವನ್ನೇ ದಿಟ್ಟಿಸಿ ಎಲ್ಲರಿಗೂ ಕೇಳುವಂತೆ ಜೋರಾಗಿ ಅರಚಿ, ಸಿಂಕಿನಲ್ಲಿ ಕ್ಯಾಕರಿಸಿ ಉಗಿದು ಹೋದ.

ಗಿಜಿಗುಡುತ್ತಿದ್ದ ರೆಸ್ಟ್‌ರೂಮ್ ಈಗ ಸ್ತಬ್ಧವಾಯಿತು. ಗೋಡೆಗೆ ಮುಖಮಾಡಿ ಕೆಲಸ ಮುಗಿಸುತ್ತಿದ್ದ ನನಗೆ ಮಾರಿಸ್‌ನ ಒಂದೊಂದು ಹನಿಗಳ ಶಬ್ದದ ತರಂಗಾಂತರವೂ ಕಿವಿಯಲ್ಲಿ ಜಲಪಾತದ ಭೋರ್ಗರೆತದಂತೆ ಪ್ರತಿಧ್ವನಿಸಿ, ನನ್ನ ಅದುವರೆಗಿನ ಪ್ರಶ್ನೆಗಳಿಗೆ ಉತ್ತರ ದೊರಕಿತು ಅಂತನ್ನಿಸಿತು. ಆದರೆ... ಎಲ್ಲವೂ ಫಾಲ್ಸಿಯೇ? ಸುಳ್ಳೇ?

ಹೊರಗೆ ಬಂದಾಗ ಆತ ಜಾಸ್ತಿ ಮಾತಾಡಲಿಲ್ಲ. ನಾನು ಆತನನ್ನು ಬಲವಾಗಿಯೇ ದೂಡಿದ್ದೆ. ಆತನಿಗೆ ಸಾಕಷ್ಟೇ ಬೇಸರವಾಗಿದೆ ಎಂದನ್ನಿಸಿತು.

ಊಟ ಆಗಲಿ ಎಂದು ಕಾದೆ. ಡೈನಿಂಗ್ ರೂಮಿನಲ್ಲಿ ಊಟಕ್ಕೆ ಕೂರಲಿಲ್ಲ. ನಾನೂ ಅವನೂ ಇಬ್ಬರೂ ತಟ್ಟೆಗೆ ಊಟ ಹಾಕಿಕೊಂಡು ಹೋಗಿ ಹೊರಗೆ ಲಾನಿನ ಮೇಲೆ ಕೂತೆವು.

'ನಾವೆಲ್ಲ ಡಾಕ್ಟರುಗಳಲ್ಲವಾ ಸೂರಿ?' ಎಂದ. ನಾನು ಸುಮ್ಮನೆ ತಲೆಯಾಡಿಸಿದೆ. 'ನಾವು ನಮ್ಮಂತವರನ್ನು ಅರಿಯಲು ಪ್ರಯತ್ನಿಸದಿದ್ದರೆ...' ಎಂದ. ನನಗೆ ಅಂಥ ಸಂದರ್ಭದಲ್ಲಿ ಕೂಡ ಕೊಂಚ ರೇಗಿತು. ಅಷ್ಟು ಜನ ಗಂಡಸರ ನಡುವೆ ನನಗೆ ಕೂಡ ಅವಮಾನವಾಗಿತ್ತಲ್ಲ. ಈತ ತಾನೊಬ್ಬನೇ ಇಲ್ಲಿ ಬಲಿಪಶು ಎಂದಂತೆ ಒದ್ದಾಡುತ್ತಿದ್ದಾನಲ್ಲ ಎಂದನ್ನಿಸಿತು. ಆದರೆ ಆತ ಅಪೇಕ್ಷಿಸುತ್ತಿರುವುದು ಕೊಂಚ ಸಹಾನುಭೂತಿಯನ್ನು. ನಾನು ಏನೂ ಮಾತಾಡದಿದ್ದರೆ ಮಾತ್ರ ಅದು ಸಾಧ್ಯ. ಸುಮ್ಮನಿದ್ದೆ.

'ಸೂರಿ, ನನ್ನನ್ನು ಕ್ಷಮಿಸು. ನಿನಗೆ ಅವಮಾನಮಾಡುವ ಉದ್ದೇಶ ನನ್ನದಾಗಿರಲಿಲ್ಲ. ಅದೊಂದು ಆಕಸ್ಮಿಕ.' ಎಂದ.

'ಸರಿ, ಮಾರಿಸ್. ನನ್ನನ್ನು ತಪ್ಪು ತಿಳಿಯಬೇಡ. ನನಗೆ ನೀನು, ನಿನ್ನ ಈ ಆಯ್ಕೆ ನನಗೆ ಯಾವತ್ತೂ ಅರ್ಥವಾಗುವುದಿಲ್ಲ. ನಾನು ನಿನ್ನನ್ನು ಹೇಗೆ ಸಂಬೋಧಿಸಬೇಕು. ಗಂಡಂತಲೋ, ಹೆಣ್ಣಂತಲೋ? ನೀನು ಇನ್ನುಮುಂದೆ ಹೀಗೇ ಬಟ್ಟೆ ಹಾಕಿಕೊಂಡು ಕೆಲಸಕ್ಕೂ ಹೋಗ್ತೀಯ? ಎರಡರಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳುವ ಸಮಯ ಇದು ಅನ್ನಿಸುತ್ತೆ' ಎಂದು ಏನೇನೋ ಕೇಳಿದೆ. ನಾನು ನೋಡಿದ ಓದಿದ ಕಡೆಯೆಲ್ಲ ಈ ಟ್ರಾನ್ಸ್ ಕ್ರಿಯೆಯ ಮೊದಲ ಹೆಜ್ಜೆಯೇ ಸೆಕ್ಷುಯಲ್ ಐಡೆಂಟಿಟಿಯ ಬದಲಾವಣೆ. ಮಾರಿಸ್‌ನನ್ನು ಅವನು, ಇವನು ಎಂದು ಕರೆಯುವುದು ಸರಿಯೇ ತಪ್ಪೇ ಎಂದೇ ನನಗೆ ಗೊತ್ತಿರಲಿಲ್ಲ.

'ಈ ಪ್ರಶ್ನೆಗೆ ಉತ್ತರ ನನಗೂ ಗೊತ್ತಿಲ್ಲ. ನಾನು ನಿನ್ನಬಳಿ ಇದೇ ವಿಷಯವಾಗಿ ಮಾತಾಡಲೆಂದೇ ಬಂದಿದ್ದು. ವೆಸ್ಟ್‌ಹೆಲ್ತ್‌ನವರು ಮೊನ್ನೆ ನನ್ನನ್ನು ಸಂದರ್ಶನ ಮಾಡಿದರು. ಎರಡನೇ ಸಂದರ್ಶನಕ್ಕೆ ಕರೆದಿದ್ದಾರೆ. ನನ್ನನ್ನು ಬೆನಿಫಿಟ್ಸ್ ವಿಭಾಗದವರು ಸಂದರ್ಶನ ಮಾಡಿದರು. ಎಲ್ಲಾದರೂ ಕೇಳಿದೀಯ, ಇಂಥ ಸಂದರ್ಶನವನ್ನು?' ಎಂದ.

ನಾನು ಇಲ್ಲವೆಂದು ತಲೆಯಾಡಿಸಿದೆ.

'ನೋಡು, ವೆಸ್ಟ್‌ಹೆಲ್ತ್ ಯಾವುದೇ ಬಣ್ಣ, ಲಿಂಗ, ಲೈಂಗಿಕ ಒಲವು ಇವುಗಳ ಮೇಲೆ ಅವರ ಕೆಲಸಗಾರರನ್ನು ಡಿಸ್ಕ್ರಿಮಿನೇಟ್ ಮಾಡೋದಿಲ್ಲ ಅನ್ನೋದು ಜಗತ್ಪ್ರಸಿದ್ಧ. ಇಡೀ ದೇಶದಲ್ಲಿ ಈ ಲಿಂಗ ಬದಲಾವಣೆಯ ಹಾರ್ಮೋನುಗಳ ಖರ್ಚು ಮತ್ತು ಆಪರೇಷನ್ ಕೂಡ ಕವರ್ ಮಾಡೋ ಕೆಲವೇ ಕೆಲವು ವಿಮಾ ಸಂಸ್ಥೆಗಳಲ್ಲಿ ಇದೂ ಒಂದು. ನಾನು ನನಗೆ ಕೆಲಸ ಗ್ಯಾರಂಟಿ